ಅಸಂಖ್ಯ ಒಳ ದಾರಿಗಳನ್ನೂ ಯೋಚಿಸ್ತಿದ್ದೆ. ಆಗ ಆ ದಾರೀಲಿ ಯಾರೋ ಒಂದಷ್ಟು ಜನ ಹಳದಿ ಕೆಂಪಿನ ಬಾವುಟ ಹಿಡ್ಕೊಂಡು ಬಂದ್ರು. ನಾನು ಅವರನ್ನೇ ನೋಡ್ತಾ ನಿಂತ್ಕೊಂಡೆ. ಬಾವುಟ ಹಿಡಿದ ಜನಕ್ಕೆ ಏನನ್ನೋ ಕೂಗಿ ಹೇಳ್ತ ಒಬ್ಬರು ಬರ್ತಿದ್ರು. ರಸ್ತೆ ಬದೀಲಿ ನಿಂತಿದ್ದೆನಲ್ಲ ನಾನು. ಹೆಗಲಿನಲ್ಲಿ ಸ್ಕೂಲಿನ ಬ್ಯಾಗು ಬೇರೆ ನೇತಾಡ್ತಿತ್ತಲ್ಲ. ಲೀಡರಿನ ಹಾಗಿದ್ದ ಆ ವ್ಯಕ್ತಿ ನನ್ನನ್ನು ನೋಡಿದ್ರು. ಎಲ್ಲರೂ ಸ್ಕೂಲಿಗೆ ಓಡೋ ಹೊತ್ತಲ್ಲಿ ರಸ್ತೆ ಬದೀಲಿ ನಿರುಮ್ಮಳವಾಗಿ ನಿಂತಿದ್ದೆನಲ್ಲ ನಾನು. ಅವರಿಗೆ ವಿಚಿತ್ರವಾಗಿ ಕಂಡಿರಬೇಕು.

'ಯಾಕೋ ಮರಿ ಇಲ್ಲಿ ನಿಂತಿದ್ದೀಯ? ಶಾಲೇಗೆ ಹೋಗ್ಲಿಲ್ವಾ?' ಅಂತ ಕೇಳಿದ್ರು. ನನಗೆ ಭಯ ಆಯ್ತು. ಅಪ್ಪನಿಗೆ ಗೊತ್ತಿರೋರಾದ್ರೆ ನನಗಿವತ್ತು ಗ್ರಾಚಾರ ಬಿಟ್ಹೋಗ್ತದೆ ಅಂತನ್ನಿಸ್ತು. ಹೆದರಿಕೆಯಿಂದ ಪಿಳಿಪಿಳೀಂತ ಕಣ್ಣು ಬಿಟ್ಟುಕೊಂಡು ಅಮಾಯಕನಂಗೆ ನೋಡ್ತಾ ನಿಂತು ಬಿಟ್ಟೆ. ಹಾಗೆ ನೋಡ್ತಿದ್ದಾಗಲೇ ಇವರು ಅಪ್ಪನಿಗೆ ಪರಿಚಯದವರಲ್ಲ ಅನ್ನಿಸಲು ಶುರುವಾಯ್ತು. ಅಷ್ಟರಲ್ಲಿ ಅವರಿಗೆ ಏನನ್ನಿಸಿತೋ, 'ಶಾಲೇಗೆ ಹೋಗ್ಬೇಕಪ್ಪ ಮರಿ. ಹಾಗೆಲ್ಲ ತಪ್ಪಿಸ್ಕೋಬಾರ್ದು' ಅಂದ್ರು. ಸ್ಕೂಲು ತಪ್ಪಿಸಿಕೊಳ್ಳೋ ದಾರಿ ಹುಡುಕ್ತಿದ್ದೋನು ನಾನು. ಇಂಥಾ ಉಪದೇಶ ಬೇಕಾಗಿತ್ತ ನನಗೆ. 'ಇವತ್ತು ಸ್ಕೂಲಿಗೆ ರಜಾ ಕೊಟ್ರು' ಎಂದು ಸಲೀಸಾಗಿ ಒಂದು ಸುಳ್ಳು ಒಗೆದೆ. ಅವರಿಗೆ ಅನುಮಾನ ಬಂದಿರ್ಬೇಕು. 'ಎಲ್ಲರಿಗೂ ಸ್ಕೂಲಿದೆ ಇವತ್ತು. ನಿಂಗೇನು ವಿಶೇಷ?' ಅಂತ ಕೇಳಿದ್ರು. 'ಇಲ್ಲಣ್ಣ ದೇವ್ರಾಣೆ ರಜಾ' ಅಂತ ನಿಜದ ತಲೆಯ ಮೇಲೆ ಹೊಡೆದಂತೆ ಹೇಳಿದೆ. ಇರಬಹುದೇನೋ ಎಂದು ಅವರು ಸುಮ್ಮನಾದರು. ಆಮೇಲೆ ನಾನು ಅವರೆದುರು ಹಲ್ಲು ಕಿಸಿಯುತ್ತ, 'ಮೆರವಣಿಗೇಲಿ ನಾನೂ ಬರ್ಲೇನಣ್ಣ?' ಅಂದೆ. ಅವರಿಗೆ ಇದ್ಯಾವುದು ಪೀಕ್ಲೆ ಅನ್ನಿಸಿತೇನೋ ಒಂದರೆಗಳಿಗೆ ನನ್ನನ್ನೇ ನೋಡಿ, 'ಆಯ್ತು ಬಾ' ಎಂದವರೇ, 'ರೀ ಕೆಂಚಪ್ಪ ಇವನಿಗೊಂದು ಬಾವುಟ ಕೊಡ್ರಿ' ಎಂದು ಯಾರಿಗೋ ಹೇಳಿ, 'ಹೋಗು ಸಾಲಲ್ಲಿ ಸೇರ್ಕೋ. ಮೆರವಣಿಗೆ ಮುಗಿದ ಮೇಲೆ ಅಲ್ಲೊಂದು ಸಭೆ ಇದೆ. ಅದು ಮುಗಿಯೋವರ್ಗೂ ಇರ್ಬೇಕು. ಅದಾದ ಮೇಲೆ ಒಟ್ಟಿಗೆ ಊಟ ಮಾಡೋಣ' ಅಂತ ಹೇಳಿ ಹೋದ್ರು.

ಅದು ನೆನಪಾದರೆ ಇವತ್ತಿಗೂ ರೋಮಾಂಚನದಿಂದ ನನ್ನ ಮೈ ಜುಮ್ಮಂತದೆ. ನನ್ನ ಬದುಕಿನ ದಿಕ್ಕನ್ನೇ ಬದಲಿಸಿಬಿಟ್ಟ ಬಾವುಟಾನ ಅವತ್ತು ನಾನು ಹಿಡಿದಿದ್ದೆ. ಅದು ನೆನಪಾದರೆ ಇನ್ನೊಂದು ಕಾರಣಕ್ಕೆ ಸಂಕಟ ಕೂಡ ಆಗ್ತದೆ. ಯಾಕೇಂದ್ರೆ ರಾಮಮೂರ್ತಿ ಅದರ ಹಿಂದಿನ ದಿನ ತೀರಿಕೊಂಡಿದ್ರು. ರಾಮಮೂರ್ತಿ ನಾಡಿನ ಪರವಾದ ಹೋರಾಟ ಕಟ್ಟಿದೋರು. ಮುಖ್ಯವಾಗಿ ನಾಡಿಗೆ ಬಾವುಟಾನ ರೂಪಿಸಿಕೊಟ್ಟೋರು ಎಂದೆಲ್ಲ ಒಳ್ಳೊಳ್ಳೆ ಮಾತನ್ನು ಭಾಷಣದಲ್ಲಿ ಕೃಷ್ಣರಾಯರು ಹೇಳಿದ್ದರು. ಆದರೆ ರಾಮಮೂರ್ತಿ ತಮ್ಮ ತೋಟದಲ್ಲಿ ಬಾವಿ ತೋಡಿಸುವಾಗ ಅದರ ದಡ ಕುಸಿದು ಮಣ್ಣಿನಡಿಯಲ್ಲಿ ಸಿಲುಕಿ ತಮ್ಮಿಬ್ಬರು ಮಕ್ಕಳ ಸಮೇತ ಸತ್ತುಹೋದ್ರಂತೆ. ಅದನ್ನೆಲ್ಲ ಹೇಳ್ತಿದ್ದಾಗ ದುಃಖ ತಡೀಲಾಗದೆ ಕೃಷ್ಣರಾಯರು ಬಿಕ್ಕಿ ಬಿಕ್ಕಿ ಅತ್ತಿದ್ರು. ಅವರು ಚಿಕ್ಕ ಮಕ್ಕಳಂಗೆ ಅತ್ತಿದ್ರೆ ಸಭೇಲಿದ್ದೋರೆಲ್ಲ ಸ್ತಬ್ಧವಾಗಿ ಬಿಟ್ಟಿದ್ರು.

ನಮ್ಮದು ಸಣ್ಣ ಹಳ್ಳಿ. ಕಾಡೇನಹಳ್ಳಿ ಅಂತ. ನಾವು ಬೆಂಗಳೂರಿಗೆ ಬಂದು ಅದಾಗಲೇ ಹತ್ತು ವರ್ಷ ಆಗಿತ್ತು. ಈ ಮೆರವಣಿಗೆ ಗಲಾಟೆ ಇವೆಲ್ಲ ನಮಗಿಲ್ಲಿ ಹೊಸದೇನಲ್ಲ. ಬೇಕಾದಷ್ಟು ನೋಡ್ತಿದ್ದಿವಿ. ಆದರೆ ಇವೆಲ್ಲ ಯಾಕಾಗ್ತವೆ ಯಾರು ಮಾಡ್ತಾರೆ ಅನ್ನೋದು ಮಾತ್ರ ಅರ್ಥ ನಮಗೆ ಆಗ್ತಿರಲಿಲ್ಲ ಅಷ್ಟೆ. ಅವತ್ತು ಕೂಡ ಹಾಗೇನೆ. ರಾಮಮೂರ್ತಿ ಸಾವಿನ ವಿಚಾರ ಬಿಟ್ಟರೆ ಉಳಿದ ದೊಡ್ಡ ದೊಡ್ಡ ವಿಚಾರಗಳೆಲ್ಲ ನನಗೆ ಅರ್ಥ ಆಗ್ಲಿಲ್ಲ. ಆದರೆ ಒಂದು ನಾಡಿನ ಚರಿತ್ರೇಲಿ